ಮಾಡುತ್ತಿದ್ದಳು. ಮಕ್ಕಳ ಸ್ಕೂಲು ಬ್ಯಾಗು, ಕಂಪಾಸು, ಹಾಕಿಕೊಳ್ಳುವ ಬಟ್ಟೆಬರೆಗಳೆಲ್ಲ ಇವತ್ತಿದೆ ಎಂದರೆ ನಾಳೆ ಇರುತ್ತಿರಲಿಲ್ಲ. ತಾಯಿಯ ಎಂಪತಿ ಹೊಡೆತಕ್ಕೆ ತತ್ತರಿಸಿದ ಮಕ್ಕಳು ಅಪ್ಪನ ಹತ್ತಿರ ಅಲವತ್ತುಕೊಂಡು ಹಾಸ್ಟೆಲ್ ಸೇರಿದರು.

ಹೆಂಡತಿಯೊಂದಿಗೆ ಜಗಳವಾಡಲು ಬಾಯಿ ತೆರೆಯಲಾಗದೇ ಅವಳ ಗಂಡ ತನ್ನ ಸಿಟ್ಟಿನ ಅಗ್ನಿಪರ್ವತ ಹೆಚ್ಚಾದಾಗ ಕುಸಿದು ಬಿದ್ದು ಆಸ್ಪತ್ರೆಗೆ ಸೇರಿಸಿದರು. ಗಂಡನ ಸೇವೆಗಾಗಿ ಓಡಿ ಬಂದ ಬಾನ್ ಚಿಕ್ಕಿಗೆ ಸಲೈನು ಹಚ್ಚಲು ಬಂದ ನರ್ಸ್ ಹರಿದ ಚಪ್ಪಲಿ ಹಾಕಿಕೊಂಡಿದ್ದು ಕಂಡಿತು. ತಕ್ಷಣ ಹೊರಗೆ ಕರೆದು ತನ್ನ ಚಪ್ಪಲಿ ಕೊಟ್ಟಳು. ಫಿನೈಲು ನೀರಲ್ಲಿ ನೆಲ ಒರೆಸುತ್ತಿದ್ದ ಆಯಾಳ ಬ್ಲೌಸು ಹರಿದಿತ್ತು ಅಂತ ಮನೆಯಿಂದ ನಾಲ್ಕು ಕುಪ್ಪಸ ತಂದು ಕೊಟ್ಟಳು. ಆಕ್ಸಿಜನ್ ಮಾಸ್ಕ್ ಒಳಗಿನಿಂದಲೇ ಇದನ್ನೆಲ್ಲ ನೋಡುತ್ತಿದ್ದ ನಾಗೇಶ ತಕ್ಷಣ ಡಾಕ್ಟರ್ ಕರೆಸಿ ಕೈ ಮುಗಿದು ಡಿಸ್ಚಾರ್ಜ್ ಮಾಡಿಸಿಕೊಂಡ. ನಿಮ್ಮ ಆಸ್ಪತ್ರೆಯಲ್ಲಿ ಇರುವ ಎಲ್ಲರಿಗೂ ಒಬ್ಬೊಬ್ಬರಿಗಾಗಿಯೇ ಒಂದೊಂದು ವಸ್ತು ಹಸ್ತಾಂತರದ ಎಂಪತಿ ಕಾರ್ಯಕ್ರಮ ಜರುಗುತ್ತ ಹೋದರೆ ನನ್ನ ನೌಕರಿಯೇ ಹೋಗಬಹುದು ಸ್ವಾಮಿ ದಯಮಾಡಿ ಬಿಟ್ಟು ಬಿಡಿ, ನಮ್ಮದು ಔಷಧಿಯಿರುವ ರೋಗವಲ್ಲ ಅಂತ ಮನೆಗೆ ಬಂದ.

ಹೆಂಡತಿಯನ್ನಂತೂ ಬದಲಿಸಲು ಸಾಧ್ಯವಿಲ್ಲದ ಕಾರಣ ತನಗೇ ಸಿಟ್ಟು ಬರದಿರುವಂತೆ ಸಿದ್ಧಿಸಮಾಧಿ ಯೋಗದ ದೀಕ್ಷೆ ಪಡೆದು ಶಾಲೆಯ ಅವಧಿ ಬಿಟ್ಟು ಉಳಿದ 8– 10 ಗಂಟೆಗಳನ್ನೂ ಧ್ಯಾನನಿರತನಾಗಿ ಕಳೆಯತೊಡಗಿದ. ಈ ಕಾರಣದಿಂದ ಬಾನ್ ಚಿಕ್ಕಿಯ ಎಂಪತಿ ಹೊಳೆಯಲ್ಲಿ ಮನೆಯ ಸಕಲ ವಸ್ತುಗಳೂ ತೊಳೆದು ಹೋದವು. ಇಂತಿಪ್ಪ ಬಾನ್ ಚಿಕ್ಕಿಯ ಅಕ್ಕನ ಮಗನಾದ ನನ್ನ ಗಂಡ ತನ್ನ ಊರಲ್ಲಿ ಶಾಲೆಯಿರದ ನಿಮಿತ್ತ ಆಕೆಯ ಮನೆಯಲ್ಲಿ ಉಳಿದುಕೊಂಡು ಹೈಸ್ಕೂಲು ಶಿಕ್ಷಣ ಪಡೆದಿದ್ದ. ಆಗಲೇ ಆಕೆಯ ಎಂಪತಿ ಕಾರ್ಯಕ್ರಮದ ಮರಿ ಸೇವಾಸದಸ್ಯನಾಗಿ ತರಬೇತುಗೊಂಡಿದ್ದ. ಪಕ್ಕದ ಮನೆಯ ಅಟ್ಟದ ಮೇಲೆ ಬಾಡಿಗೆಯಿದ್ದ ಕಾಲೇಜು ಹುಡುಗರು ನೆಲದ ಮೇಲೆ ಕುಳಿತು ಓದುವ ಚಾಪೆ ಹರಿದಿದೆ, ಪಕ್ಕದ ಓಣಿಯ ಚಾಳದ ಮೂರನೇ ಮನೆಯಲ್ಲಿರುವ ಹೊಸ ದಂಪತಿಗಳು ನೆಲದ ಮೇಲೆ ಮಲಗುತ್ತಾರೆ ಮುಂತಾದ ಸಂಗತಿಗಳನ್ನು ತನ್ನ ಊರು ತಿರುಗುವ ಸರ್ವೆ ಕೆಲಸದಿಂದ ಕಂಡು ಹಿಡಿದು, ಬಾನ್ ಚಿಕ್ಕಿಗೆ ವರದಿ ಸಲ್ಲಿಸಿ, ಪರಿಣಾಮದಲ್ಲಿ ಅವರ ಮನೆಯ ಏಕೈಕ ತೇಗದ ಮಂಚ ಮತ್ತು ಚಾಪೆಗಳು ದಾನರೂಪದಿಂದ ಹೊರ ಹೋದ ತರುವಾಯದಲ್ಲಿ ಆಕೆಯ ಮಕ್ಕಳು ನನ್ನ ಗಂಡನನ್ನು ಗಡಿಪಾರು ಮಾಡಿ ಜಿಲ್ಲಾಕೇಂದ್ರದಲ್ಲಿ ಓದಲು ಇಟ್ಟರಂತೆ.

ತೀರಾ ಇತ್ತೀಚೆಗೆ ನಡೆದ ಪ್ರಸಂಗವೊಂದನ್ನು ತಿಳಿಸಿ ಎನ್ನ ಪತಿಯ ಎಂಪತಿ ಪುರಾಣವನ್ನು ನಿಲ್ಲಿಸುತ್ತೇನೆ. ಕಳೆದ ತಿಂಗಳು ಅವನ ಗೆಳೆಯ ತನ್ನ ಮಗಳ ಮದುವೆ ನಿಕ್ಕಿಯಾಗಿದೆ ಸ್ವಲ್ಪ ಸಹಾಯಕ್ಕಾಗಿ ಬಾ ಎಂದು ಕರೆದ. ಮೊದಲು ಅಲ್ಲಿ ಇಲ್ಲಿ ಓಡಾಡುವ ಕೆಲಸಕ್ಕೆ ಸಮಯ ಕೊಡುವ ಸಹಾಯದೊಂದಿಗೆ ಎಂಪತಿ ಶುರುವಾಯಿತು. ಕ್ರಮೇಣ ಕಡಿಮೆ ಬಿದ್ದ ದುಡ್ಡು ಒದಗಿಸುವುದಾಯಿತು, ಪರಿಚಯದ ಅಂಗಡಿಯಲ್ಲಿ ಉದ್ರಿ ಕೊಡಿಸುವುದಾಯಿತು, ಕಾರನ್ನು ಖಾಲಿಯಾದಾಗೊಮ್ಮೆ ಪೆಟ್ರೋಲು ತುಂಬಿಸಿ ಅವರ ಉಪಯೋಗಕ್ಕೇ ಬಿಡುವುದಾಯಿತು. ಹೀಗೇ ಮುಂದುವರಿದ ಎಂಪತಿ ಸೇವಾ, 'ಏ ದೋಸ್ತಾ ಇವತ್ತು ಡ್ರೈವರ್ ಕೈ ಕೊಟ್ಟ ನೀನೇ ಬಾ', 'ಇವತ್ತು ಭಟ್ರು ಕೈ ಕೊಟ್ರು ನೀನೇ ಮಂತ್ರ ಹೇಳಿ ಪೂಜಾ ಮಾಡಿಸು' ಎಂದು ತನ್ನ ಆಳಅಗಲ, ವ್ಯಾಪ್ತಿಗಳನ್ನು ಹೆಚ್ಚಿಸಿಕೊಂಡಿತು. ಇಷ್ಟಾಗುವ ತನಕ ಸುಮ್ಮನಿದ್ದ ನಾನು ಈಗ ಎಚ್ಚೆತ್ತುಕೊಳ್ಳಲೇ ಬೇಕಾಯಿತು. ಏಕೆಂದರೆ ಇವತ್ತು ವರ ಕೈ ಕೊಟ್ಟ ನೀನೇ ತಾಳಿ ಕಟ್ಟಲೆ ಎಂದರೆ!

ನನ್ನ ವಾಗ್ಬಾಣಗಳ ಮಳೆಯಿಂದ ಪತಿಯನ್ನು ತೋಯಿಸಿ, ಕೋಪದ ಬೆಂಕಿಯಲ್ಲಿ ಸುಟ್ಟು, ಎಚ್ಚರಿಕೆಯ ಸಲಾಕೆಯಲ್ಲಿ ಚುಚ್ಚಿ ಹಿಡಿದು, ಮನೆ ಬಾಗಿಲಲ್ಲಿಯೇ ಕಟ್ಟಿ ಇಟ್ಟದ್ದೇನೆ. ನೀವ್ಯಾರಾದರೂ ಉಪಭೋಗಿಗಳು ಫೋನು ಹಚ್ಚಿದರೆ ಎಂಪತಿದಾರರು ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ ಎನ್ನುವ ಉತ್ತರ ಬರುತ್ತದೆ ಎಂಬ ಸಂಗತಿಯನ್ನು ತಿಳಿಸೋಣವೆಂದು ಇಷ್ಟೆಲ್ಲ ಹೇಳಬೇಕಾಯಿತು.

●